

ಸಂಪಾದಕೀಯ

# ಭಾರತವೆಂಬ ತೀರ್ಥ..

ಭಾರತವೆಂಬುದು ಪವಿತ್ರ ಭೂಮಿ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಗುಜರಾತಿನಿಂದ ಅಸ್ಸಾಮಿನವರೆಗೆ ಅಸಂಖ್ಯಾತ ಪುಣ್ಯಕ್ಷೇತ್ರಗಳು, ಪಾವನ ನದಿಗಳು, ಹಲವಾರು ಮಹಿಮಾನ್ವಿತ ಪ್ರದೇಶಗಳು ತುಂಬಿಕೊಂಡಿವೆ. ಇಲ್ಲಿನ ಮಣ್ಣಿನ ಕಣಕಣವೂ ಪವಿತ್ರ, ಬೀಸಿಬರುವ ಗಾಳಿಯೂ ಪಾವನ ; ಈ ಮಣ್ಣಿನಲ್ಲಿ ಜನ್ಮವೆತ್ತಿ ಬಂದಿರುವುದೇ ಮಹಾಭಾಗ್ಯ — ಹೀಗೆ ಜನರು ನಂಬುತ್ತಾರೆ. ಇದೇಕೆ ಹೀಗೆ ಎಂದು ಕೇಳಿದರೆ ಅನೇಕರಿಗೆ ಉತ್ತರ ಹೇಳಲು ತಿಳಿಯದು; ಆದರೆ ಈ ನಂಬಿಕೆಯ ಹಿಂದೆ ಅದೆಷ್ಟು ಬಲವಾದ ಕಾರಣವಿದೆಯೆಂದರೆ, ಭಾರತದ ಸಂಸ್ಕೃತಿ-ಇತಿಹಾಸ-ಜನಜೀವನದಲ್ಲಿ ಅದಕ್ಕೆ ಉತ್ತರ ಹುಡುಕುತ್ತಾ ಹೋದಂತೆ ನಮಗೆ ಆಶ್ಚರ್ಯವೆನಿಸುತ್ತದೆ. ಅದೆಂಥ ಸಂಸ್ಕೃತಿ, ಅದೆಂಥ ಆಧ್ಯಾತ್ಮಿಕ ಸಂಪತ್ತು , ಅದೆಂತಹ ಜನಜೀವನ ಇಲ್ಲಿನದು! ಇಂಥ ಅಸಾಧರಣ ಮಹಿಮೆ, ಪಾವಿತ್ರ್ಯ, ದಿವ್ಯತೆ ಈ ದೇಶಕ್ಕೆ ಬಂದುದಾದರೂ ಹೇಗೆ?

## ಆಧ್ಯಾತ್ಮಿಕ ಪರಂಪರೆಯ ಹಿನ್ನೆಲೆ

ಇಡೀ ಭೂಮಿಯನ್ನೇ ದೇವತೆಯಾಗಿ ಕಂಡು, 'ಭೂಮಾತೆ' ಎಂದು ಪೂಜಿಸುವ ಭಾರತೀಯರು, ಜಗತ್ತನ್ನೆಲ್ಲ ಪಾವನವೆಂದು ಭಾವಿಸುವುದು ಅತ್ಯಂತ ಸಹಜ. ಆದರೆ ಇಲ್ಲಿನ ಸಂಸ್ಕೃತಿ ಹೆಚ್ಚಿನ ಮಹತ್ವ ನೀಡಿರುವುದು ಭೌತಿಕ ಜಗತ್ತಿಗಿಂತ ಆಧ್ಯಾತ್ಮಿಕ ಸತ್ಯಗಳಿಗೆ; ವ್ಯಕ್ತ ಜಗತ್ತಿಗಿಂತ ಅವ್ಯಕ್ತ ತತ್ತ್ವಗಳಿಗೆ. ಅಂತಹ ಸತ್ಯಗಳು ಎಲ್ಲಿ ವ್ಯಕ್ತವಾಗುವುವೋ, ಯಾವ ವ್ಯಕ್ತಿಯಲ್ಲಿ ಪ್ರಕಾಶಗೊಳ್ಳುವುವೋ ಅಲ್ಲೆಲ್ಲ ದಿವ್ಯತೆ, ಪಾವಿತ್ರ್ಯ ಅಸಾಧಾರಣವಾಗಿ ಗೋಚರಿಸುವುವು ಎಂದು ನಮ್ಮ ದೇಶದ ಜನರು ನಂಬುತ್ತಾರೆ. ಆದ್ದರಿಂದ ಭಗವಂತನ ಆವಿರ್ಭಾವ ಎಲ್ಲೆಲ್ಲಿ ಉಂಟಾಗುವುದೋ ಅದೆಲ್ಲವೂ ಪವಿತ್ರ ಹಾಗೂ ಪೂಜ್ಯ. ಅನೇಕ ಬಾರಿ ಕಲ್ಲಿನ ಮೂಲಕ ಜನರು ಭಗವಂತನ ಆವಿರ್ಭಾವವನ್ನು ಕಂಡರು; ನದಿ, ವೃಕ್ಷ, ಗಿರಿ-ಗುಹೆಗಳಲ್ಲೂ ಭಗವಂತನ ಶಕ್ತಿಯನ್ನು ಕಂಡರು. ಅಲ್ಲೆಲ್ಲ ಪೂಜೆ, ಉತ್ಸವ, ಆಚರಣೆ, ಆರಾಧನೆಗಳು ನಡೆಯತೊಡಗಿದವು. ಪ್ರತಿಯೊಂದು ಪವಿತ್ರ ತಾಣದೊಂದಿಗೆ ಯಾರೋ ಒಬ್ಬ ಸಾಧು, ಸಂತರ ಸಂಬಂಧವಿದ್ದೇ ಇರುತ್ತದೆ. 'ಇಲ್ಲಿ ಇಂಥಾ ಸಂತರು ತಪಸ್ಸು ಮಾಡಿದ್ದರು' ; 'ಇಲ್ಲಿ ಅವರಿಗೆ ಭಗವಂತನ ದರ್ಶನವಾಯಿತು' ಅಥವಾ 'ಈ ಪ್ರದೇಶದಲ್ಲಿ ಅವರು ಭಗವಂತನಲ್ಲಿ ಲೀನರಾದರು' ಎಂಬ ಐತಿಹ್ಯಗಳನ್ನು ನಾವು ಭಾರತದ ಉದ್ದಗಲಕ್ಕೂ ನೋಡುತ್ತೇವೆ. ಒಟ್ಟಿನಲ್ಲಿ, ಆಧ್ಯಾತ್ಮಿಕತೆ ನಮ್ಮ ದೇಶದ ಜೀವಾಳವಾಗಿರುವುದರಿಂದ, ಈ ತತ್ತ್ವ-ನಂಬಿಕೆ ನಮ್ಮ ಬದುಕನ್ನು ರೂಪಿಸಿರುವುದರಿಂದ ನಮ್ಮ ಜೀವನದ ಪ್ರತಿಯೊಂದು ಅಂಗಗಳಲ್ಲೂ ಅದು ಗಾಢವಾಗಿ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಇಡೀ ಭರತಖಂಡವೇ ಪುಣ್ಯಕ್ಷೇತ್ರವೆನ್ನುತ್ತೇವೆ. ಇಲ್ಲಿರುವಷ್ಟು ಅಸಂಖ್ಯಾತ ದೇವ-ದೇವತೆಗಳು, ಅವತಾರ ಪುರುಷರು, ಸಾಧು-ಸಂತರು, ಪುಣ್ಯಕ್ಷೇತ್ರಗಳು, ಆಧ್ಯಾತ್ಮಿಕ ಪಂಥಗಳು ಜಗತ್ತಿನ ಬೇರೆಲ್ಲೂ ಕಂಡುಬರುವುದಿಲ್ಲ. ಭಾರತದ ಯಾವುದೋ ಮೂಲೆಗೆ ಹೋಗಿ ನೋಡಿದರೂ, 'ಇದು ರಾಮನ ಪಾದ, ಸೀತೆಯನ್ನು ಹುಡುಕುತ್ತಾ ಲಂಕೆಗೆ ಹೋಗುವಾಗ ಇಲ್ಲಿಗೆ ಬಂದಿದ್ದ' ಎನ್ನುತ್ತಾರೆ. ಹಲವಾರು ಕಡೆ ರಾಮನ ಪಾದ, ಭೀಮನ ಹೆಜ್ಜೆ, ಕೃಷ್ಣನ ಲೀಲಾಕ್ಷೇತ್ರ , ಶಿವಪಾರ್ವತಿಯರ ವಾಸಸ್ಥಾನಗಳನ್ನು ಜನರು ಗುರುತಿಸುತ್ತಾರೆ. ಚಾರಿತ್ರಿಕವಾಗಿ ಅವರೆಲ್ಲ ಸತ್ಯವೇ ಎಂಬುದನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮ ಶ್ರದ್ಧೆ, ನಂಬಿಕೆಗಳೇ ಇಲ್ಲಿನವರ ಬದುಕಿಗೆ ಮುಖ್ಯವಾಗುತ್ತದೆ.

## ಪುಣ್ಯಕ್ಷೇತ್ರಗಳ ವೈವಿಧ್ಯ

ಇಡೀ ಭಾರತವೇ ವೈವಿಧ್ಯತೆಯ ತವರೂರು. 'ವಿವಿಧತೆಯಲ್ಲಿ ಏಕತೆ' ಎಂಬುದು ಇಲ್ಲಿನ ಆಧ್ಯಾತ್ಮಿಕ ತತ್ತ್ವ ಹಾಗೂ ಜೀವನದ ಕ್ರಮ. ವಿವಿಧ ಪ್ರದೇಶಗಳಲ್ಲಿ ದಿವ್ಯತೆಯನ್ನು ಕಂಡುಕೊಳ್ಳುವುದು, ಅದರಿಂದ ಜೀವನಕ್ಕೆ ಆಧ್ಯಾತ್ಮಿಕ ಸ್ಫೂರ್ತಿ, ಪ್ರೇರಣೆ ಹೊಂದುವುದು ಇಲ್ಲಿ ಬಹಳ ಮುಖ್ಯವಾದುದು. ಇತರ ದೇಶಗಳಲ್ಲಿ ಪ್ರವಾಸ, ಪಿಕ್‌ನಿಕ್ ಮಾಡುವುದು ಆನಂದಕ್ಕಾಗಿ, ಮೋಜಿಗಾಗಿ; ಆದರೆ ಭಾರತದಲ್ಲಿ ಅಧಿಕ ಜನರು ಮಾಡುವುದು ತೀರ್ಥಯಾತ್ರೆಯನ್ನು. ಪುಣ್ಯಕ್ಷೇತ್ರಗಳ ಸಂದರ್ಶನದಿಂದ ಪುಣ್ಯವೂ ಲಭಿಸುವುದು; ಅದರೊಂದಿಗೆ ಆನಂದವೂ ಲಭಿಸುವುದು - ಇದು ಭಾರತೀಯ ಮನೋಧರ್ಮ. ಆಧ್ಯಾತ್ಮಿಕ ಆನಂದಕ್ಕೆ ಹೊರತಾದ ಆನಂದದಲ್ಲಿ ನಮ್ಮ ಜನರಿಗೆ ಹೆಚ್ಚು ಆಸಕ್ತಿಯಿಲ್ಲ. ಮಜಾ ಮಾಡಲು ಟೂರ್ ಹೋಗುವುದಕ್ಕಿಂತ, 'ತೀರ್ಥಯಾತ್ರೆ ಮಾಡುತ್ತೇನೆ' ಎಂದರೆ ಹೆಚ್ಚು ಗೌರವ, ಮರ್ಯಾದೆ. ಇದಕ್ಕೆ ಕಾರಣ ನಮ್ಮ ದೃಷ್ಟಿಕೋನದಲ್ಲಿರುವ ವ್ಯತ್ಯಾಸ. ಸಮಯ, ಹಣ ಹಾಗೂ ಶ್ರಮ - ಇವನ್ನು ನಾವು ವಿನಿಯೋಗಿಸುವುದಿದ್ದರೆ, ಅದು ಅತಿ ಉನ್ನತವಾದ, ಶ್ರೇಷ್ಠವಾದ ಹಾಗೂ ಆಧ್ಯಾತ್ಮಿಕವಾದ ಕಾರ್ಯಕ್ಕೆ ವಿನಿಯೋಗಿಸಬೇಕು; ಇಲ್ಲದಿದ್ದರೆ ಎಲ್ಲವೂ ವ್ಯರ್ಥವೆಂದು ನಾವು ನಂಬುತ್ತೇವೆ.

ಉತ್ತರದಲ್ಲಿ ಹಿಮಾಲಯ ಪರ್ವತವಿದೆ. ಜೀವನದಿಗಳಾದ ಗಂಗಾ-ಯಮುನಾ-ನರ್ಮದಾ-ಕಾವೇರಿ ಮುಂತಾದ ಪಾವನ ನದಿಗಳು ದೇಶದ ಹಲವು ಭಾಗಗಳಲ್ಲಿ ಹರಿಯುತ್ತಿವೆ. ಮಧ್ಯಭಾರತದ ವಿಂಧ್ಯಪರ್ವತ, ದಕ್ಷಿಣದ ಸಹ್ಯಾದ್ರಿ, ಪೂರ್ವದ ಅರುಣಾಚಲ ಮುಂತಾದ ಪರ್ವತಗಳು ದಟ್ಟ ಅರಣ್ಯಗಳಿಂದ ವ್ಯಾಪಿಸಿಕೊಂಡಿವೆ. ರಾಮೇಶ್ವರ, ಕನ್ಯಾಕುಮಾರಿಯೇ ಮೊದಲಾದ ಸಮುದ್ರದ ತೀರಗಳಲ್ಲಿ ಕೂಡ ತೀರ್ಥಕ್ಷೇತ್ರಗಳಿವೆ. ಹೀಗೆ ದೇಶದ ಎಲ್ಲೆಡೆ ತೀರ್ಥ

ಕ್ಷೇತ್ರಗಳು ಇಡಿಕಿರಿದಿವೆ. ಯಾತ್ರೆ ಮಾಡುವವರು ಒಂದೊಂದು ಬಗೆಯ ಸಂಕಲ್ಪ ಮಾಡಿಕೊಂಡು ಆಯಾ ಕ್ಷೇತ್ರಗಳ ದರ್ಶನ ಮಾಡುತ್ತಾರೆ; ಸಮಗ್ರ ಭಾರತಯಾತ್ರೆಯೆಂಬುದು ಒಂದು ಜೀವಿತಾವಧಿಯಲ್ಲಿ ಅಸಾಧ್ಯವಾದ ಮಾತು.

ದ್ವಾದಶ ಜ್ಯೋತಿರ್ಲಿಂಗಗಳು, ಚತುರ್ಧಾಮಗಳು, ಶಕ್ತಿ ಪೀಠಗಳು, ಮೋಕ್ಷದಾಯಕ ಕ್ಷೇತ್ರಗಳು – ಹೀಗೆ ಬೇರೆ ಬೇರೆ ತೀರ್ಥಕ್ಷೇತ್ರಗಳ ಸಮುದಾಯವನ್ನು ದರ್ಶಿಸುವ ಪರಂಪರೆಯೂ ಬೆಳೆದು ಬಂದಿದೆ. ಇಂತಹ ತೀರ್ಥಕ್ಷೇತ್ರಗಳನ್ನು ದರ್ಶನ ಮಾಡಿ ಪೂರೈಸುವಾಗ ಉಂಟಾಗುವ ಧನ್ಯತಾಭಾವವು ಭಕ್ತಜನರ ಜೀವನದುದ್ದಕ್ಕೂ ಸ್ಮರಣೀಯವಾಗಿರುತ್ತದೆ.

### ಭೌಗೋಳಿಕ ಮಹತ್ವ

ಭರತಖಂಡದಲ್ಲಿ ಒಂದೊಂದು ಭೂಪ್ರದೇಶವೂ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. ಆಯಾ ಪ್ರದೇಶದ ವಿಶೇಷತೆಯೊಂದಿಗೆ ಅಲ್ಲಿನ ಪುಣ್ಯಕ್ಷೇತ್ರದ ಮಹಿಮೆ ಸೇರಿಕೊಂಡಿರುವುದರಿಂದ, ಯಾತ್ರಿಕರ ದೃಷ್ಟಿಕೋನ ಕೇವಲ ಪುಣ್ಯಸಂಪಾದನೆ ಅಥವಾ ಆಧ್ಯಾತ್ಮಿಕ ಉನ್ನತಿ ಮಾತ್ರವಾಗಿರದೆ ಅನುಭವ ಸಂಪನ್ನತೆ ಕೂಡ ಅವರ ಗುರಿಯಾಗಿರುತ್ತದೆ. 'ದೇಶ ಸುತ್ತು, ಕೋಶ ಓದು' ಎಂಬ ಗಾದೆಯಂತೆ, ಹಲವು ಪ್ರದೇಶಗಳನ್ನು ಸುತ್ತಾಡಿ ಬಂದವರ ಅರಿವು, ದೃಷ್ಟಿಕೋನ ವ್ಯಾಪಕವಾಗುತ್ತದೆ. ಭಾರತದ ವಿವಿಧ ಪ್ರದೇಶಗಳ ಜನರ ಜೀವನಶೈಲಿ, ಸಂಸ್ಕೃತಿ, ಉಡುಗೆ-ತೊಡುಗೆ, ಭಾಷೆ ಇತ್ಯಾದಿಗಳನ್ನು ಅರಿಯುವ ಒಂದು ಅವಕಾಶ ಕೂಡ ಇದರಿಂದ ಸಾಧ್ಯವಾಗುತ್ತದೆ. ಆದರೆ, ಆಧ್ಯಾತ್ಮಿಕ ಹಿನ್ನೆಲೆಯ ಯಾತ್ರೆಯಲ್ಲಿ ಈ ಬಗೆಯ ಲಾಭಗಳು ಗೌಣವೆಂಬುದನ್ನು ಮರೆಯುವಂತಿಲ್ಲ.

ಬಹಳ ಪ್ರಾಚೀನ ಕಾಲದಿಂದಲೂ ಹಿಮಾಲಯ ಪರ್ವತ ಶ್ರೇಣಿಯು ಆಧ್ಯಾತ್ಮಿಕ ಸಾಧಕರಿಗೆ, ಯಾತ್ರಿಕರಿಗೆ ಅಪಾರ ಸ್ಫೂರ್ತಿ ನೀಡುವ ಪವಿತ್ರನೆಲೆಯಾಗಿದೆ. ಕೈಲಾಸಪರ್ವತ, ಮಾನಸ ಸರೋವರ, ಕೇದಾರ-ಬದರಿ, ಗಂಗೋತ್ರಿ-ಯಮುನೋತ್ರಿ, ಹರಿದ್ವಾರ-ಋಷಿಕೇಶ, ಉತ್ತರ ಕಾಶಿ — ಮುಂತಾದ ಪವಿತ್ರ ಕ್ಷೇತ್ರಗಳಿಗೆ ಅಪಾರ ಸಂಖ್ಯೆಯಲ್ಲಿ ಯಾತ್ರಿಕರು ಹೋಗುತ್ತಾರೆ. ಸಾಧು, ಸಂನ್ಯಾಸಿಗಳಿಗಂತೂ ಹಿಮಾಲಯವೇ ಸಾಧನೆಗೆ ಅತ್ಯುತ್ತಮ ಪ್ರದೇಶವಾಗಿದೆ. ಅನಾದಿಕಾಲದಿಂದಲೂ ಹಿಮಾಲಯದ ತಪ್ಪಲಲ್ಲಿ, ನದೀತೀರದಲ್ಲಿ, ಗಿರಿಕಂದರಗಳಲ್ಲಿ ಏಕಾಂತವನ್ನರಸಿ ಹೋಗುವ ಸಂನ್ಯಾಸಿಗಳು ಧ್ಯಾನನಿರತ ಜೀವನವನ್ನು ನಡೆಸುತ್ತ ಬಂದಿದ್ದಾರೆ. ಒಂದೊಂದು ಸ್ಥಳದಲ್ಲೂ ಒಬ್ಬೊಬ್ಬ ಮಹಾತ್ಮನು ತಪಸ್ಸು ಮಾಡಿ, ಅದು ಅತಿಪಾವನ ಸ್ಥಳವೆನಿಸಿದೆ. ಈ ಕಾರಣದಿಂದಲೇ ಇರಬೇಕು, ಹಿಮಾಲಯದ ಕೆಲವು ಪ್ರದೇಶಗಳಲ್ಲಿ ಆಧ್ಯಾತ್ಮಿಕ ಸಾಧನೆ ಮಾಡುವವರಿಗೆ ಹೆಚ್ಚು ಶ್ರಮವಿಲ್ಲದೆ ಮನಸ್ಸು ಭಗವಂತನ ಕಡೆಗೆ ಹರಿಯುವುದು. 'ದೂರದ ಗುಹೆಯಲ್ಲಿ ಏಕಾಗ್ರತೆಯಿಂದ ಧ್ಯಾನ ಮಾಡುವ ಸಾಧುವಿನ ಆಧ್ಯಾತ್ಮಿಕ ತರಂಗಗಳು ಸಾವಿರಾರು ವರ್ಷಗಳವರೆಗೂ ಕೆಲಸ ಮಾಡುತ್ತವೆ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಯಾತ್ರೆ ಹೋಗುವ ಸಾಧಕರು ಅಂತಹ ಮಹಾತ್ಮರ ಸಾಧನೆಯ ಸ್ಥಳಕ್ಕೆ ಹೋದ ಕೂಡಲೇ, ಅವರ ಮನಸ್ಸು ಅಲ್ಲಿನ ಆಧ್ಯಾತ್ಮಿಕ ತರಂಗಗಳಿಗೆ ಮಿಡಿಯುವುದು. ಇದನ್ನು ಅನೇಕ ಮಂದಿ ಯಾತ್ರಿಕರು ಅನುಭವಿಸಿದ್ದಾರೆ. ಒಬ್ಬ ವ್ಯಕ್ತಿಯ ಇಡೀ ಜೀವನವನ್ನೇ ಪರಿವರ್ತಿಸುವ ಶಕ್ತಿ ಅದಕ್ಕಿರುತ್ತದೆ.

ಗಂಗಾನದಿ ಇಡೀ ಭಾರತವನ್ನು ಪಾವನಗೊಳಿಸುವ ನದಿ. ಜಗತ್ತಿನ ಎಲ್ಲೇ ಇರಲಿ, ಭಾರತೀಯನಿಗೆ ಗಂಗಾನದಿಯ ಮೇಲಿರುವ ಅಪಾರ ಭಕ್ತಿ, ಪ್ರೇಮ ಇದಕ್ಕೆ ಎಣೆಯಿಲ್ಲ. ದೂರದ ದೇಶದಲ್ಲೆಲ್ಲೋ ಇರುವ, ವಾಣಿಜ್ಯ-ವ್ಯವಹಾರಗಳಿಂದ ದಣಿದಿರುವ ಭಾರತೀಯ ಮನಸ್ಸು ಒಂದು ಕ್ಷಣ ವಿಶ್ರಾಂತಿ ಪಡೆಯುವಾಗ ಗಂಗಾಮಾತೆಯನ್ನು ನೆನೆದು, 'ಅಮ್ಮಾ, ಗಂಗೆ!' ಎಂದುಕೊಂಡರೆ ಸಾಕು, ಮನಸ್ಸು ಪಾವನವಾಗುತ್ತದೆ! ಶ್ರೀರಾಮಕೃಷ್ಣರು ಗಂಗೆಯನ್ನು 'ಬ್ರಹ್ಮವಾರಿ' ಎಂದು ಕರೆದರು. ಗಂಗೆಯ ಸ್ಪರ್ಶದಿಂದ ಪಾಪಗಳೆಲ್ಲವೂ ಕಳೆದುಹೋಗುವುದು ಎಂದು ಶ್ರೀಮಾತೆ, ಸ್ವಾಮೀಜಿ ಕೂಡ ನಂಬಿದ್ದರು. ಭಗೀರಥನ ತಪಸ್ಸಿನಿಂದ, ಶಿವ ಹಾಗೂ ವಿಷ್ಣುವಿನ ಅನುಗ್ರಹದಿಂದ ಧರೆಗಿಳಿದ ಗಂಗೆ ಅನಂತಕಾಲ ಭಾರತಭೂಮಿಯ ಜೀವಿಗಳನ್ನು ಪಾವನಗೊಳಿಸುತ್ತ ದಿವ್ಯನೆಲೆಗೆ ಕರೆದೊಯ್ಯುತ್ತಾಳೆ.

ಇತ್ತೀಚೆಗೆ ಕಾಲ ಬದಲಾಗಿದೆ, ಜನರ ದೃಷ್ಟಿಕೋನವೂ ಬದಲಾಗಿದೆ. ಯಾತ್ರೆ ಎಂಬುದು ಆಧ್ಯಾತ್ಮಿಕ ಜೀವನದ ಒಂದು ಅಂಗ ಎಂಬುದನ್ನು ಜನರು ಮರೆಯುತ್ತಿದ್ದಾರೆ. ಪುಣ್ಯಕ್ಷೇತ್ರಗಳಲ್ಲೂ ವಾಣಿಜ್ಯೀಕರಣ, ವ್ಯಾಪಾರೀ ಮನೋಭಾವ ಕಂಡುಬರುತ್ತಿದೆ. ಹಲವೆಡೆ ಪುಣ್ಯಕ್ಷೇತ್ರಗಳ ದರ್ಶನಕ್ಕಿಂತ, ಪ್ರವಾಸಿಗರನ್ನು ಸೆಳೆಯಲು ಹಲವಾರು ಬಗೆಯ ಇತರ ಆಕರ್ಷಣೆಗಳನ್ನು ಹೆಚ್ಚಿಸುತ್ತಾರೆ. ಹೀಗಿದ್ದರೂ, ಭಾರತದಲ್ಲಿ ತೀರ್ಥಯಾತ್ರೆ ಎಂಬುದು ಶ್ರೇಷ್ಠ ಆದರ್ಶವಾಗಿಯೇ ಉಳಿದಿದೆ. ತೀರ್ಥಯಾತ್ರೆಯ ಹಿಂದಿರುವ ನಿಜವಾದ ಉದ್ದೇಶವೇನು, ಸರಿಯಾದ ತೀರ್ಥಯಾತ್ರೆ ಎಂದರೇನು, ತೀರ್ಥಕ್ಷೇತ್ರಗಳ ಮಹತ್ವವನ್ನು ಅರಿತು ಯಾತ್ರೆ ಮಾಡುವ ಅಗತ್ಯವೇನು – ಈ ಎಲ್ಲ ಅಂಶಗಳನ್ನು ಯಾತ್ರಿಕರು ಮೊದಲೇ ತಿಳಿದುಕೊಂಡರೆ, ಆಗ ತೀರ್ಥಯಾತ್ರೆ ಒಂದು ಉತ್ತಮ ಆಧ್ಯಾತ್ಮಿಕ ಸಾಧನೆಯೇ ಆಗುವುದು. ಪುಣ್ಯಕ್ಷೇತ್ರಗಳ ಸಂದರ್ಶನ ನಿಜವಾದ ಅರ್ಥದಲ್ಲಿ 'ದಿವ್ಯದರ್ಶನ'ವಾಗುವುದು. ❉

### ಜನವರಿ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಭಾನುವಾರ | ಕಲ್ಪತರು ದಿನಾಚರಣೆ |
| ೨ | ಸೋಮವಾರ | ಏಕಾದಶಿ |
| ೫ | ಗುರುವಾರ | ಸ್ವಾಮಿ ತುರೀಯಾನಂದ ಜಯಂತಿ |
| ೧೨ | ಗುರುವಾರ | ರಾಷ್ಟ್ರೀಯ ಯುವ ದಿನಾಚರಣೆ |
| ೧೪ | ಶನಿವಾರ | ಸ್ವಾಮಿ ವಿವೇಕಾನಂದ ಜಯಂತಿ |
| ೧೮ | ಬುಧವಾರ | ಏಕಾದಶಿ |
| ೨೩ | ಸೋಮವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| ೨೫ | ಸೋಮವಾರ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ |